**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಃ ಉತ್ತರ ಕನ್ನಡ ಃ ಕಾರವಾರ**

**ಸ್ಪೆಷಲ್ ಕೇಸ್ ನಂಃ 07/2015**

**ಫಿರ್ಯಾದಿ** ಃ ಸರ್ಕಾರದ ಪರವಾಗಿ
ಕಾರವಾರ ಲೋಕಾಯುಕ್ತ ಪೊಲೀಸ ಠಾಣೆ.

**-ವಿರುದ್ಧ-**

**ಆರೋಪಿಃ** ಗಣೇಶ ತಂದೆಃ ಅನಂತ ನಾಯ್ಕ

**ಃ ದೋಷಾರೋಪಣೆ ಃ**

ಶ್ರೀ ವಿ.ಎಸ್.ಧಾರವಾಡಕರ, ಬಿ.ಕಾಂ. ಎಲ್ಎಲ್.ಬಿ(ಸ್ಪೆಷಲ್) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಉತ್ತರ ಕನ್ನಡ, ಕಾರವಾರ ಆದ ನಾನು,

ಗಣೇಶ ತಂದೆಃ ಅನಂತ ನಾಯ್ಕ,
ಸಹಾಯಕ ನಿರ್ದೇಶಕರು,
ಅಕ್ಷರ ದಾಸೋಹ ವಿಭಾಗ,
ತಾಲ್ಲೂಕು ಪಂಚಾಯತ್ ಕುಮಟಾ.

ಎಂಬುವ ನಿಮ್ಮ ಮೇಲೆ ಆಪಾದಿಸುವುದೇನೆಂದರೆಃ

ಕಾರವಾರ ಲೋಕಾಯುಕ್ತ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕುಮಟಾ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿನ ಅಕ್ಷರ ದಾಸೋಹ ವಿಭಾಗದಲ್ಲಿ ಸಹಾಯಕ ನಿರ್ದೇಶಕರೆಂದು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದ ಆರೋಪಿಯಾದ ನೀವು ಫಿರ್ಯಾದಿ - ರಾಮಾ ಬೀರಪ್ಪ ನಾಯ್ಕ ಇವರು 241 ಸರಕಾರಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಗೆ ಧಾರವಾಡದಿಂದ ಹಾಲಿನ ಪುಡಿಯನ್ನು ತಂದು ಸಾಗಾಣಿಕೆ ಮಾಡಿ ವಿತರಿಸಿದ ಬಗ್ಗೆ ಶಾಲೆಗಳಿಂದ ಸ್ವಿಕೃತಿಯನ್ನು ಸಂಬಂಧಪಟ್ಟ ಶಾಲಾ ಮುಖ್ಯಸ್ಥರಿಂದ ಪಡೆದು ಒಟ್ಟು ಸ್ವಿಕೃತಿಗಳಿಗೆ ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಪಡೆದು ದೃಢೀಕರಿಸಿ ಧಾರವಾಡ ಹಾಲು ಒಕ್ಕೂಟಕ್ಕೆ ಕಳುಹಿಸಿದ ನಂತರ ಹಾಲಿನ ಪುಡಿಯ ಸಾಗಾಣಿಕೆ ಬಿಲ್ಲನ್ನು ಪಡೆಯಬೇಕಾಗಿದ್ದರಿಂದ ಸದರಿ ಸ್ವೀಕೃತಿಗಳಿಗೆ ದೃಢೀಕರಿಸಿಕೊಡುವಂತೆ ದಿನಾಂಕಃ 10-09-2013 ರಂದು ನಿಮ್ಮನ್ನು ಕೇಳಿಕೊಂಡಾಗ ನೀವು ತನಗೆ ಶೇಕಡ 20 ರಂತೆ "ರೂ.5,000/- ಗಳ ಲಂಚದ ಹಣವನ್ನು ಕೊಟ್ಟರೆ ಮಾತ್ರ ದೃಢೀಕರಿಸಿ ಕೊಡುವುದಾಗಿ"

ಹೇಳಿದ್ದರಿಂದ ಫಿರ್ಯಾದಿ ತನಗೆ ಅಷ್ಟು ಹಣ ಕೊಡಲು ಆಗುವುದಿಲ್ಲ ಸ್ವಲ್ಪ ಕಡಿಮೆ ಮಾಡಿ ಅಂತ ಕೇಳಿಕೊಂಡಾಗ ಆರೋಪಿಯಾದ ನೀವು ರೂ.3,000 ಕ್ಕೆ ಒಪ್ಪಿಕೊಂಡಿದ್ದರಿಂದ ದಿನಾಂಕಃ 16.09.2013 ರಂದು ನಿಮ್ಮನ್ನು ಕಛೇರಿಯಲ್ಲಿ ಭೇಟಿಯಾಗಿ ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ ನೀವು ಈ ಹಿಂದೆ ಹೇಳಿದ ಹಣ ತಂದಿರುವ ಬಗ್ಗೆ ಕೇಳಿ ಅವರನ್ನು ಕಛೇರಿಯಿಂದ ಹೊರಗೆ ದ್ವಿಚಕ್ರ ವಾಹನ ಇಟ್ಟಿರುವ ಸ್ಟ್ಯಾಂಡ್ ಹತ್ತಿರ ಹೋಗಿ ಫಿರ್ಯಾದಿಯಿಂದ ರೂ.3,000/- ಲಂಚದ ಹಣವನ್ನು ತೆಗೆದುಕೊಂಡು ಈ ಮೂಲಕ ಬ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ-1988 ಕಲಂ 7 ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ಸೆಷನ್ಸ್ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ವೇಳೆಯಂದು ನೀವು ಕುಮಟಾ ತಾಲ್ಲೂಕು ಪಂಚಾಯತ್ ಕಛೇರಿಯ ಅಕ್ಷರ ದಾಸೋಹ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಪಿರ್ಯಾದಿ ರಾಮಾ ಬೀರಪ್ಪ ನಾಯ್ಕ, ಇವರ ಹಾಲಿನ ಪುಡಿಯ ಸಾಗಾಣಿಕೆ ಬಿಲ್ಲಗಳ ಸ್ವೀಕೃತಿಗಳಿಗೆ ದೃಢೀಕರಿಸಿಕೊಡುವ ಸಲುವಾಗಿ ಪಿರ್ಯಾದಿಯಿಂದ ರೂಪಾಯಿ 3,000/- ಲಂಚ ಬೇಡಿಕೆ ಮಾಡಿ ರೂಪಾಯಿ 3,000/- ಲಂಚ ಪಡೆದು ದಾಳಿ ನಡೆಸಿದ ಸಮಯದಲ್ಲಿ ಸಿಕ್ಕಿಬಿದ್ದು ಈ ಮೂಲಕ ಲಂಚ ಪ್ರತಿಬಂಧಕ ಕಾಯ್ದೆ-1988 ಕಲಂ 13(1)(ಡಿ) ಸಹ ಕಲಂ 13(2) ರ ಮೇರೆಗೆ ದಂಡನೀಯವಾದ ಅಪರಾಧವನ್ನು ಈ ಸೆಷನ್ಸ್ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 21 ನೇ ಜುಲೈ 2017.

(ವಿ.ಎಸ್.ಧಾರವಾಡಕರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
ಉತ್ತರ ಕನ್ನಡ, ಕಾರವಾರ